# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1635 |
| ಸದಸ್ಯರ ಹೆಸರು | : | ಶ್ರೀ ಸಿ.ಟಿ ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.12.2025. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮೀಣ ಗ್ರಂಥಾಲಯಗಳಲ್ಲಿ ಎಷ್ಟು ಗ್ರಂಥಾಲಯ ಮೇಲ್ವಿಚಾರಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಗ್ರಾಮೀಣ ಗ್ರಂಥಾಲಯಗಳಲ್ಲಿ ಒಟ್ಟು 5436 ಗ್ರಂಥಾಲಯ ಮೇಲ್ವಿಚಾರಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ.<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಗ್ರಂಥಾಲಯ ಮೇಲ್ವಿಚಾರಕರಿಗೆ ನೀಡುತ್ತಿರುವ ಗೌರವಧನ/ವೇತನ ಎಷ್ಟು; ಗೌರವಧನ /ವೇತನ ಹೊರತುಪಡಿಸಿ ನೀಡುತ್ತಿರುವ ಇನ್ನಿತರೆ ಸೌಲಭ್ಯಗಳೇನು; ಇವರಿಗೆ ವೇತನ ಪಾವತಿಸಲು ಪ್ರತೀ ತಿಂಗಳು ಅಗತ್ಯವಿರುವ ಒಟ್ಟು ಹಣ ಎಷ್ಟು; | 1. ಗ್ರಂಥಾಲಯ ಮೇಲ್ವಿಚಾರಕರಿಗೆ 2025-26ನೇ ಸಾಲಿಗೆ ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ಕನಿಷ್ಠ ವೇತನ ರೂ.19,201.32/-ಗಳು (ಹತ್ತೊಂಬತ್ತು ಸಾವಿರದ ಇನ್ನೂರ ಒಂದು ರೂಪಾಯಿ ಮೂವತ್ತೆರಡು ಪೈಸೆ) ನೀಡಲಾಗುತ್ತಿದೆ.<br><br>2. ವಿವಾಹಿತ ಮಹಿಳಾ ಗ್ರಂಥಾಲಯ ಮೇಲ್ವಿಚಾರಕರಿಗೆ 180 ದಿನಗಳ ಪ್ರಸೂತಿ ರಜೆ, ಪುರುಷ ಮೇಲ್ವಿಚಾರಕರಿಗೆ 15 ದಿನಗಳ ಪಿತೃತ್ವ ರಜೆ, ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಗ್ರಂಥಾಲಯ ಮೇಲ್ವಿಚಾರಕರ ಅವಲಂಬಿತರಿಗೆ ಅರ್ಹ ಅನುಕಂಪದ ಆಧಾರದ ನೇಮಕಾತಿ, ಖಾಲಿ ಹುದ್ದೆ ಆಧರಿಸಿ ಅಥವಾ ಪರಸ್ಪರ ಒಪ್ಪಿಗೆಯ ಮೇಲೆ ಸೇವಾವಧಿಯಲ್ಲಿ ಒಂದು ಬಾರಿ ಜಿಲ್ಲೆಯೊಳಗೆ ಹಾಗೂ ಅಂತರ್-ಜಿಲ್ಲೆ ವರ್ಗಾವಣೆ ಸೌಲಭ್ಯ, ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆ ಮತ್ತು 02 ದಿನಗಳ ನಿರ್ಬಂಧಿತ ರಜಾ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br><br>3. 5884 ಗ್ರಂಥಾಲಯ ಮೇಲ್ವಿಚಾರಕರಿಗೆ ಕನಿಷ್ಠ ವೇತನ ಪಾವತಿಸಲು ಮಾಸಿಕ ರೂ.11,29,80,566.88/- (ಹನ್ನೊಂದು ಕೋಟಿ ಇಪ್ಪತ್ತೊಂಭತ್ತು ಲಕ್ಷದ ಎಂಭತ್ತು ಸಾವಿರದ ಐದುನೂರ ಅರವತ್ತಾರು ರೂಪಾಯಿ ಎಂಬಂತ್ತೆಂಟು ಪೈಸೆ) ಗಳ ಅಗತ್ಯವಿರುತ್ತದೆ. |

| | | |
|---|---|---|
| (ಇ) | ಗ್ರಂಥಾಲಯ ಮೇಲ್ವಿಚಾರಕರಿಗೆ ಪ್ರತೀ ತಿಂಗಳು ಸಮಯಕ್ಕೆ ಸರಿಯಾಗಿ ವೇತನ ಪಾವತಿ ಆಗದಿರಲು ಕಾರಣಗಳೇನು; ಪ್ರತೀ ತಿಂಗಳು ಸರಿಯಾದ ಸಮಯಕ್ಕೆ ವೇತನ ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | 1. ಸರ್ಕಾರದ ಆದೇಶ ಸಂಖ್ಯೆ:RDPR/425/GPA/2023 ಬೆಂಗಳೂರು, ದಿನಾಂಕ:13.02.2024ರಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಮೇಲ್ವಿಚಾರಕರಿಗೆ ದಿನಾಂಕ:04.09.2023 ರಿಂದ ಜಾರಿಗೆ ಬರುವಂತೆ ಮಾಸಿಕ ಕನಿಷ್ಠ ವೇತನ ರೂ.16,382.52/-ಗಳು ಮತ್ತು ವಾರ್ಷಿಕವಾಗಿ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು (VDA) ಪಾವತಿಸಲು ಆದೇಶಿಸಲಾಗಿರುತ್ತದೆ. ಅದರನ್ವಯ ಸರ್ಕಾರದಿಂದ ರೂ.12000/- ಗಳನ್ನು ಪಾವತಿಸಲಾಗುತ್ತಿದೆ.<br>2. ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರ ಸಂಖ್ಯೆ: ಕಪಂರಾಆ/ಅಭಿವೃದ್ಧಿ/ ಗ್ರಂಥಾಲಯ/ 262/2022, ದಿನಾಂಕ:30.12.2023 ರನ್ವಯ ಕನಿಷ್ಠ ವೇತನದ ವ್ಯತ್ಯಾಸದ ಮೊತ್ತವನ್ನು ಗ್ರಾಮ ಪಂಚಾಯತಿಗಳಲ್ಲಿ ಸಂಗ್ರಹವಾಗುವ ಶೇಕಡಾ 6 ರ ಗ್ರಂಥಾಲಯ ಉಪಕರವನ್ನು ಜಿಲ್ಲಾ ಪಂಚಾಯತಿಗಳಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಗೆ ಜಮಾ ಮಾಡಿ ಸದರಿ ಮೊತ್ತದಿಂದ ಪಾವತಿಸಲು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ವ್ಯತ್ಯಾಸದ ಮೊತ್ತವನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. |
| (ಈ) | ಕಲಬುರಗಿ ಜಿಲ್ಲೆಯಲ್ಲಿ ಗ್ರಂಥಾಲಯ ನೌಕರರು ಮುಷ್ಕರ ನಡೆಸಿದ್ದು ಏಕೆ; ಅವರ ಬೇಡಿಕೆಗಳೇನು; | ಗ್ರಂಥಾಲಯ ನೌಕರರ ಬೇಡಿಕೆಗಳು ಈ ಕೆಳಕಂಡಂತಿವೆ.<br>1. ಪ್ರತಿ ತಿಂಗಳು ಗೌರವ ಧನ (ವೇತನ) ಹಾಗೂ ಅರಿಯರ್ಸ್ ಖಾತೆಗೆ ಜಮಾ ಮಾಡುವುದು.<br>2. ಗ್ರಂಥಾಲಯಗಳಿಗೆ ಮೂಲ ಸೌಕರ್ಯ ಒದಗಿಸುವುದು.<br>3. ಗ್ರಂಥಪಾಲಕರನ್ನು ಪಂಚಾಯಿತಿ ಸಿಬ್ಬಂದಿಗಳು ಗೌರವಯುತವಾಗಿ ನಡೆದುಕೊಳ್ಳುವ ಕುರಿತು.<br>4. ಬಾಕಿ ಉಳಿದಿರುವ ಅರಿಯರ್ಸ್ ಖಾತೆಗೆ ಜಮಾ ಮಾಡುವುದು.<br>5. ನೇರವಾಗಿ ಗ್ರಂಥಪಾಲಕರ ಖಾತೆಗೆ ವೇತನ ಪಾವತಿಸುವುದು.<br>6. ಸರಕಾರದ ಸೌಲಭ್ಯಗಳು ನೇರವಾಗಿ ಸಿಗುವಂತೆ ಮಾಡುವುದು. |
| (ಉ) | ಕಲಬುರಗಿ ಜಿಲ್ಲೆಯಲ್ಲಿ ಗ್ರಂಥಪಾಲಕಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು ಸರ್ಕಾರದ ಗಮನದಲ್ಲಿದೆಯೇ; ಆತ್ಮಹತ್ಯೆ ಮಾಡಿಕೊಳ್ಳಲು ಕಾರಣಗೇನು; ಆತ್ಮಹತ್ಯೆ ಮಾಡಿಕೊಂಡ ಗ್ರಂಥಪಾಲಕಿಯ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಿದೆಯೇ? | ಬಂದಿದೆ.<br>1. 02 ತಿಂಗಳ ವೇತನ ಪಾವತಿ ಬಾಕಿ ಇರುವ ಕಾರಣದಿಂದ ಮನಸೋತು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಡೆತ್ ನೋಟ್‌ನಲ್ಲಿ ತಿಳಿಸಲಾಗಿದೆ, ಗ್ರಂಥಾಲಯ ಮೇಲ್ವಿಚಾರಕಿಯ ಆತ್ಮಹತ್ಯೆ ಕುರಿತು ಮಳಖೇಡ ಪೋಲೀಸ್ ಠಾಣೆಯಲ್ಲಿ UDR ದಾಖಲಾಗಿದ್ದು ಈ ಕುರಿತು ತನಿಖೆ ಪ್ರಗತಿಯಲ್ಲಿದೆ. |

| | | |
|---|---|---|
| | | 2. ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಗ್ರಂಥಾಲಯ ಮೇಲ್ವಿಚಾರಕಿಯ ಕುಟುಂಬ ಅವಲಂಬಿತರಿಗೆ ರೂ. 10.00 ಲಕ್ಷಗಳ ಸಹಾಯಧನವನ್ನು ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲದಿಂದ ಪರಿಹಾರ ನೀಡಲು ಠರಾವು ಪಾಸ್ ಮಾಡಲಾಗಿದೆ.<br><br>3. ಗ್ರಂಥಾಲಯ ಮೇಲ್ವಿಚಾರಕಿಯ ಮಗಳಿಗೆ ಅನುಕಂಪದ ಆಧಾರದ ಮೇಲೆ ಖಾಯಂ ನೌಕರಿಗಾಗಿ ಬೇಡಿಕೆ ಇಟ್ಟಿದ್ದು, ಪ್ರಸ್ತುತ ಸದರಿಯವರ ಮಗಳು ಇನ್ನೂ ಅಪ್ರಾಪ್ತ ವಯಸ್ಸಿನವರಾಗಿದ್ದು, ನಂತರ ಸರ್ಕಾರದ ಹಂತದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಗ್ರಾಅಪ 1019 ಗ್ರಾಪಂಅ 2025

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಅನುಬಂಧ | | | | |
|---|---|---|---|---|
| ರಾಜ್ಯದ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ವಿವರ | | | | |
| ಕ್ರ. ಸಂ. | ಜಿಲ್ಲೆ ಯ ಹೆಸರು | ಗ್ರಾಮ ಪಂಚಾಯಿತಿಗಳ ಸಂಖ್ಯೆ | ಗ್ರಾಮ ಪಂಚಾಯಿತಿ ಗ್ರಂಥಾಲಯ ಕೇಂದ್ರಗಳ ಒಟ್ಟು ಸಂಖ್ಯೆ | ಗ್ರಾಮ ಪಂಚಾಯಿತಿ ಗ್ರಂಥಾಲಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ |
| 1 | ಬಾಗಲಕೋಟೆ | 195 | 180 | 172 |
| 2 | ಬಳ್ಳಾರಿ | 100 | 100 | 84 |
| 3 | ಬೆಂಗಳೂರು ನಗರ | 85 | 86 | 77 |
| 4 | ಬೆಂಗಳೂರು( ಗ್ರಾ) | 101 | 97 | 89 |
| 5 | ಬೆಂಗಳೂರು ದಕ್ಷಿಣ | 126 | 130 | 122 |
| 6 | ಬೆಳಗಾವಿ | 500 | 486 | 425 |
| 7 | ಬೀದರ್ | 182 | 183 | 172 |
| 8 | ಚಾಮರಾಜನಗರ | 130 | 128 | 121 |
| 9 | ಚಿಕ್ಕಬಳ್ಳಾಪುರ | 157 | 153 | 141 |
| 10 | ಚಿಕ್ಕಮಗಳೂರು | 226 | 226 | 209 |
| 11 | ಚಿತ್ರದುರ್ಗ | 189 | 202 | 184 |
| 12 | ದಕ್ಷಿಣ ಕನ್ನಡ | 223 | 212 | 207 |
| 13 | ದಾವಣಗೆರೆ | 194 | 206 | 196 |
| 14 | ಧಾರವಾಡ | 146 | 140 | 105 |
| 15 | ಗದಗ | 122 | 124 | 118 |
| 16 | ಹಾಸನ | 264 | 257 | 253 |
| 17 | ಹಾವೇರಿ | 223 | 217 | 202 |
| 18 | ಕಲ್ಬುರ್ಗಿ | 261 | 262 | 235 |
| 19 | ಕೊಡಗು | 102 | 98 | 87 |
| 20 | ಕೋಲಾರ | 154 | 157 | 149 |
| 21 | ಕೊಪ್ಪಳ | 153 | 150 | 138 |
| 22 | ಮಂಡ್ಯ | 233 | 234 | 202 |
| 23 | ಮೈಸೂರು | 256 | 236 | 208 |
| 24 | ರಾಯಚೂರು | 179 | 179 | 169 |
| 25 | ಶಿವಮೊಗ್ಗ | 262 | 258 | 247 |
| 26 | ತುಮಕೂರು | 330 | 336 | 324 |
| 27 | ಉಡುಪಿ | 155 | 150 | 148 |
| 28 | ಉತ್ತರ ಕನ್ನಡ | 229 | 228 | 213 |
| 29 | ವಿಜಯಪುರ | 211 | 202 | 193 |
| 30 | ವಿಜಯನಗರ | 137 | 143 | 128 |
| 31 | ಯಾದಗಿರಿ | 122 | 124 | 118 |
| | **ಒಟ್ಟು** | **5947** | **5884** | **5436** |